ಗಂಭೀರ ಪ್ರಶ್ನೆ. ಆದರೆ ಆ ಬಗ್ಗೆ ಯಾರೂ ಗಂಭೀರವಾಗಿರುವಂತೆ ಕಾಣಿಸುತ್ತಿಲ್ಲ. ಹಾಗಾಗಿ ಅಧ್ಯಕ್ಷರಾದ ನೀವೇ ಈ ಕುರಿತು ಯೋಗ್ಯ ನಿರ್ಧಾರವನ್ನು ತಿಳಿಸಬೇಕಾಗಿ ನನ್ನ ಕೋರಿಕೆ' ಎಂದು ಅಂದವಾಗಿ ಮೇಕಪ್ ಮಾಡಿಕೊಂಡು ಬಂದ ಹೆಣ್ಣಿಲಿ ನುಡಿಯಿತು. ಅದಕ್ಕೆ ಉತ್ತರವಾಗಿ ಅಧ್ಯಕ್ಷ ಇಲಿ 'ಹೌದು ಮಗೂ, ನೀನು ಹೇಳುತ್ತಿರುವುದು ನಿಜ, ಹಿಂದಿನ ಸಲವೂ ಬೆಕ್ಕಿಗೆ ಯಾರು ಘಂಟೆ ಕಟ್ಟುವುದು ಎಂಬ ಬಗ್ಗೆ ಒಮ್ಮತಕ್ಕೆ ಬಾರದೆ ಸಭೆ ಬರ್ಖಾಸ್ತುಗೊಂಡಿತ್ತು. ಆದರೆ ಈ ಬಾರಿ ಹಾಗಾಗದಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಎಲ್ಲರೂ ಕುಂಟುನೆಪವೊಡ್ಡಿ ನಾನೊಲ್ಲೆ ನಾನೊಲ್ಲೆ ಎಂದರೆ ಸಮಸ್ಯೆ ಬಗೆಹರಿಯುವುದಿಲ್ಲ. ಯುವಕರೇ ಮುಂದೆ ಬಂದು ನಮ್ಮನ್ನು ಈ ಸಂಕಟದಿಂದ ಪಾರು ಮಾಡಬೇಕಿತ್ತು. ಆದರೆ ಅವರೇ ತಮ್ಮ ಜವಾಬ್ದಾರಿಯಿಂದ ಜಾರಿಕೊಳ್ಳುತ್ತಿರುವುದು ಬೇಸರದ ಸಂಗತಿ 'ಎಂದು ವಿಷಾದ ವ್ಯಕ್ತಪಡಿಸಿತು. ಅದು ಮುಂದುವರಿಯುತ್ತಾ ನಾನು ಇದನ್ನು ಮುಂಚಿತವಾಗಿಯೇ ಗ್ರಹಿಸಿ ಇದಕ್ಕೆ ತಕ್ಕ ಪರಿಹಾರವನ್ನೂ ಕಂಡು ಹಿಡಿದಿದ್ದೇನೆ' ಎಂದಿತು.

'ಆ ಪರಿಹಾರ ಯಾವುದು?' ಎಲ್ಲ ಇಲಿಗಳು ಒಕ್ಕೊರಲಿನಿಂದ ಅಧ್ಯಕ್ಷ ಇಲಿಯನ್ನು ಕೇಳಿದವು.

ಬೆಕ್ಕಿಗೆ ಯಾರು ಘಂಟೆ ಕಟ್ಟಬೇಕೆಂಬುದನ್ನು ಲಾಟರಿ ಎತ್ತುವ ಮೂಲಕ ನಿರ್ಧರಿಸಬೇಕಾಗುತ್ತದೆ. ಇಲ್ಲಿ ಈ ಬಟ್ಟಲಿನಲ್ಲಿ ಸಣ್ಣ ಸಣ್ಣ ಚೀಟಿಗಳನ್ನು ಹಾಕಲಾಗಿದ್ದು ಒಂದು ಚೀಟಿಯಲ್ಲಿ ಮಾತ್ರ ಘಂಟೆ ಎಂದು ಬರೆಯಲಾಗಿದೆ. ಎಲ್ಲರೂ ಈ ಬಟ್ಟಲಿನಿಂದ ಒಂದೊಂದು ಚೀಟಿಯನ್ನು ಹೆಕ್ಕಿಕೊಳ್ಳಬೇಕು. ಯಾರ ಕೈಗೆ ಘಂಟೆ ಎಂಬ ಚೀಟಿ ಬರುವುದೋ ಅವರು ಬೆಕ್ಕಿನ ಕೊರಳಿಗೆ ಘಂಟೆ ಕಟ್ಟಲೇಬೇಕು' ಎಂದು ಖಡಾಖಂಡಿತವಾಗಿ ಅಧ್ಯಕ್ಷ ಇಲಿ ನುಡಿಯಿತು.

ಇದನ್ನು ಕೇಳಿ ಸಭೆಗೆ ಸಭೆಯೇ ಸ್ತಬ್ಧವಾಯ್ತು. ಎಲ್ಲ ಇಲ್ಲಿಗಳೂ ಅಧ್ಯಕ್ಷರ ನಿರ್ಣಯಕ್ಕೆ ತಲೆಬಾಗುವುದು ಅನಿವಾರ್ಯವಾಗಿತ್ತು. ಹಾಗಾಗಿ ಪ್ರತಿಯೊಂದು ಇಲ್ಲಿಯೂ ಘಂಟೆ ಎಂದು ಬರೆದಿರುವ ಚೀಟಿ ತಮ್ಮ ಕೈಗೆ ಬಾರದಿರಲಿ ಎಂದು ತಾವು ನಂಬಿಕೊಂಡು ಬಂದಿರುವ ದೇವರನ್ನು ಮನಸ್ಸಿನಲ್ಲೇ ಪ್ರಾರ್ಥಿಸಿಕೊಂಡವು. ಇನ್ನೇನು ಕೆಲವೇ ಸೆಕುಂಡುಗಳಲ್ಲಿ ಲಾಟರಿ ಆರಂಭಿಸಬೇಕೆನ್ನುವಾಗ ನಿದ್ದೆಯಿಂದ ಎದ್ದ ಬೆಕ್ಕು ಕಳ್ಳ ಹೆಜ್ಜೆಗಳನ್ನಿರಿಸುತ್ತಾ ಸಭೆಯತ್ತ ಬರತೊಡಗಿತು. ಇದನ್ನು ಕಂಡು ಹೆದರಿದ ಇಲಿಗಳೆಲ್ಲಾ ಚೆಲ್ಲಾಪಿಲ್ಲಿಯಾಗಿ ಸಿಕ್ಕ ಸಿಕ್ಕ ಕಡೆಗಳಿಗೆ ಪಲಾಯನಗೈದವು. ದುರದೃಷ್ಟವಶಾತ್ ಬೆಕ್ಕಿಗೆ ಘಂಟೆ ಕಟ್ಟುವ ಮತ್ತೊಂದು ಪ್ರಯತ್ನವೂ ವಿಫಲವಾಯ್ತು. ■

# ವನದೇವಿಯ ಪ್ರತ್ಯುಪಕಾರ

ಶಿವಪುರ ಎಂಬ ಊರಿನ ಪಕ್ಕದಲ್ಲಿ ಒಂದು ಕಾಡಿತ್ತು. ಊರಿನ ಹೊರವಲಯದಲ್ಲಿ ಮಕ್ಕಳಿಲ್ಲದ ಅಜ್ಜಿಯೊಬ್ಬಳು ವಾಸವಾಗಿದ್ದಳು. ಎಲ್ಲಿಂದಲೋ ಬಂದು ಸೇರಿಕೊಂಡಿದ್ದ ಒಂದು ಮೇಕೆಮರಿಯನ್ನು ಆಕೆ ಸಾಕುತ್ತಿದ್ದಳು. ಮಕ್ಕಳಿಲ್ಲದ ಅಜ್ಜಿಗೆ ಅದೇ ಮಗುವಾಗಿತ್ತು. ಅಜ್ಜಿಯ ಆರೈಕೆಯಿಂದ ಅದು ದಷ್ಟಪುಷ್ಟವಾಗಿ ಬೆಳೆದಿತ್ತು. ಈಗ ಎರಡು ಮೂರು ಮರಿಗಳಿಗೆ ಮೇಕೆ ಜನ್ಮ ನೀಡಿತ್ತು. ಆಡಿನಿಂದ ದೊರೆಯುತ್ತಿದ್ದ ಹಾಲನ್ನು ಅಜ್ಜಿ ಬಳಸಿ, ಉಳಿದ ಹಾಲನ್ನು ಹಳ್ಳಿಗೆ ಹೋಗಿ, ಮಾರಿ ಬರುತ್ತಿದ್ದಳು. ಪಕ್ಕದ ಕಾಡಿಗೆ ಹೋಗಿ, ಅಲ್ಲಿ ಸಿಗುವ ಗಿಡಮೂಲಿಕೆಗಳನ್ನು ತಂದು, ಹಳ್ಳಿಯ ಜನರಿಗೆ ಮದ್ದು ಮಾಡಿ ಕೊಡುತ್ತಾ, ನಾಟಿವೈದ್ಯೆಯಾಗಿದ್ದಳು. ಒಟ್ಟಿನಲ್ಲಿ ಯಾರಿಗೂ ಹೊರೆಯಾಗದೇ ತನ್ನ ಹೊಟ್ಟೆಪಾಡನ್ನು ತಾನೇ ನೋಡಿಕೊಳ್ಳುತ್ತಿದ್ದಳು. ಆಡುಗಳು ಮಾತ್ರವಲ್ಲದೆ, ನಾಯಿ, ಬೆಕ್ಕುಗಳು ಅವಳ ಸಂಗಾತಿಯಾಗಿದ್ದವು. ಅಜ್ಜಿ ಎಲ್ಲಿಗೇ ಹೋಗಲಿ ಎಲ್ಲವೂ ಅವಳನ್ನು ಹಿಂಬಾಲಿಸುತ್ತಿದ್ದವು.

ಒಂದು ದಿನ ಅಜ್ಜಿಯ ಸಂಸಾರ ಕಾಡಿಗೆ ಪ್ರಯಾಣ ಬೆಳೆಸಿತ್ತು. ಗಿಡ ಮೂಲಿಕೆಗಳನ್ನು ಹುಡುಕಿ, ಸುಸ್ತಾಗಿ, ಒಂದು ಮರದ ಕೆಳಗೆ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಳು. ಆಡು ತನ್ನ ಮರಿಗಳೊಂದಿಗೆ ಸುತ್ತಲೂ ಮೇಯುತ್ತಿತ್ತು. ಕೆಲವೇ ಕ್ಷಣಗಳಲ್ಲಿ ಕೊಡಲಿ, ಕತ್ತಿಗಳ ಸಮೇತ ನಾಲ್ಕಾರು ಜನರು ಕಾಡನ್ನು ಪ್ರವೇಶಿಸಿ, ಅಜ್ಜಿಯ ಎದುರಿದ್ದ ಒಂದು ಬೃಹದಾಕಾರದ ಮರವನ್ನು ಕತ್ತರಿಸಲು ಕೊಡಲಿಯಿಂದ ಪೆಟ್ಟುಗಳನ್ನು ಹಾಕತೊಡಗಿದರು. ಅಷ್ಟರಲ್ಲಿ ಆ ಮರದೊಳಗಿನಿಂದ ಒಂದು ಅಶರೀರವಾಣಿ ಹೊರಹೊಮ್ಮಿತು. 'ಕಟುಕರೇ ನನ್ನನ್ನು ಮುಟ್ಟಬೇಡಿ. ಸುಮ್ಮನೆ ಇಲ್ಲಿಂದ ಹೊರಟು ಹೋಗಿ. ಒಂದುವೇಳೆ ನನ್ನನ್ನು ಏನಾದರೂ ಕಡಿದು ಹಾಕಿದರೆ ಪರಿಣಾಮ ನೆಟ್ಟಗಿರುವುದಿಲ್ಲ. ನಾನು ವನದೇವತೆ. ನರ ರಾಕ್ಷಸರೇ ಎಚ್ಚರಿಕೆ'.

ಆ ವಾಣಿಯನ್ನು ಕೇಳುತ್ತಲೇ ಎಲ್ಲ ಹೆದರಿ ಓಡಿದರು. ಜನ ಕತ್ತಿಯಿಂದ ಕತ್ತರಿಸಿದ ಒಂದೆರಡು ಜಾಗಗಳಿಂದ ನೆತ್ತರು ಸುರಿಯಲಾರಂಭಿಸಿತು. ಎಲ್ಲವನ್ನೂ ನೋಡುತ್ತಿದ್ದ ಅಜ್ಜಿ ತಡಮಾಡದೆ ತನ್ನ ಬಳಿಯಿದ್ದ ಸೊಪ್ಪನ್ನು ಕಲ್ಲಿನಿಂದ ಜಜ್ಜಿ, ಅದರ ರಸವನ್ನು ಮೃದುವಾಗಿ ಮರದ ಕಾಂಡಕ್ಕೆ ಲೇಪಿಸಿದಳು. ರಕ್ತ ನಿಂತಿತು. ವನದೇವತೆ ಪ್ರತ್ಯಕ್ಷಳಾಗಿ 'ತಾಯೀ, ನಾನು ಸಂಪನ್ನಳಾಗಿದ್ದೇನೆ. ನಿನಗೇನಾದರೂ ಬೇಡಿಕೆ ಇದ್ದಲ್ಲಿ ಕೋರಿಕೋ' ಎಂದಳು. 'ಈಗೇನೂ ಬೇಡ ದೇವಿ. ಸಮಯ ಬಂದಾಗ ಕೇಳುತ್ತೇನೆ' ಎಂದು ಆಡುಗಳೊಂದಿಗೆ ಮನೆಗೆ ಹಿಂದಿರುಗಿದಳು.

ಸ್ವಲ್ಪ ದಿನಗಳ ನಂತರ ಒಂದು ತೋಳ ಊರಿನೊಳಗೆ ಬಂದು, ಅಜ್ಜಿಯ ಮನೆಯಲ್ಲಿದ್ದ ಬೆಕ್ಕನ್ನು ತಿಂದು ಹಾಕಿತು. ಒಮ್ಮೆ ರುಚಿ ನೋಡಿದ ನಂತರ ಅದು ಕೋಳಿ, ಮೇಕೆಯ ಮರಿಗಳನ್ನು ಕಬಳಿಸತೊಡಗಿತು. ಅದರ ಉಪದ್ರ ಜಾಸ್ತಿಯಾದಾಗ ಅಜ್ಜಿಗೆ ವನದೇವತೆಯ ನೆನಪಾಯಿತು. ಕಾಡಿಗೆ ಹೋದ ಅಜ್ಜಿಗೆ ವನದೇವತೆ ಇರುವ ಮರದ ಅಡಿಯಲ್ಲಿ ಮಲಗಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದ ತೋಳವನ್ನು ಕಂಡು ಅವಳ ರೊಟ್ಟಿ ಜಾರಿ, ತುಪ್ಪಕ್ಕೆ ಬಿದ್ದಂತಾಯಿತು. ನಿಧಾನವಾಗಿ ಮರದ ಹತ್ತಿರ ಹೋದ ಅಜ್ಜಿ ತನಗೇ ಬಂದಿರುವ ಕಷ್ಟವನ್ನು ಅರುಹಿದಳು. 'ನಾನು ಅದಕ್ಕೆ ಬುದ್ಧಿ ಕಲಿಸುತ್ತೇನೆ ನೀನು ದೂರದಲ್ಲಿ ನಿಂತು ನೋಡುತ್ತಿರು' ಎಂದು ವನದೇವಿ ಅಭಯ ನೀಡಿದಳು.

ಆ ದಿನ ಗಡದ್ದಾಗಿ ಪ್ರಾಣಿಗಳನ್ನು ಭಕ್ಷಿಸಿದ್ದ ತೋಳ ಇಹಲೋಕದ ಅರಿವೇ ಇಲ್ಲದಂತೆ ನಿದ್ರಿಸಿತ್ತು. ಅಜ್ಜಿ ಬೇರೊಂದು ಮರದ ಬುಡದಲ್ಲಿ ನಿಂತು ನೋಡುತ್ತಿದ್ದಳು. ವನದೇವತೆಯು ಪ್ರತ್ಯಕ್ಷಳಾಗಿ, ಹೆದರಬೇಡವೆಂದು ಅಜ್ಜಿಗೆ ಹೇಳಿದಳು. ಅಜ್ಜಿ ನೋಡ ನೋಡುತ್ತಿದ್ದಂತೆ ಒಮ್ಮೆಲೆ ಕಾಡೆಲ್ಲಾ ನಡುಗುವಂತೆ ಚಂಡಮಾರುತವು ಅಪ್ಪಳಿಸಿತು. ವನದೇವತೆ ವಾಸವಾಗಿದ್ದ ಮರದ ಬೃಹತ್ತಾದ ಕೊಂಬೆಯೊಂದು ಕೆಳಗೆ ಆರಾಮವಾಗಿ ಮಲಗಿದ್ದ ತೋಳದ ಮೇಲೆ ಧಡಾರನೆ ಬಿದ್ದಿತು. ಕೊಂಬೆ ಬಿದ್ದ ರಭಸಕ್ಕೆ ತೋಳದ ಪ್ರಾಣಪಕ್ಷಿ ಹಾರಿ ಹೋಗಿತ್ತು.

ಅಜ್ಜಿಗೆ ಉಪಕಾರ ಮಾಡಲೋಸುಗ ತನ್ನ ಒಂದು ಕೈಯಂತಿರುವ ಒಂದು ರೆಂಬೆಯನ್ನು ವನದೇವಿ ಕಳೆದುಕೊಂಡಿದ್ದಳು. ಆದರೂ ಉಪಕಾರ ಮಾಡಿದ ಅಜ್ಜಿಗೆ ದೇವಿ ಪ್ರತ್ಯುಪಕಾರ ಮಾಡಿದ್ದಳು.

■ **ಪುಷ್ಪ ಎನ್.ಕೆ. ರಾವ್**

ಚಿತ್ರ: ಸಂತೋಷ್ ಸಸಿಹಿತ್ಲು

